# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025.

## ನ್ಯಾಕ್ 'ಎ' ಶ್ರೇಣಿ ಮಾನ್ಯತೆ

ದೂರವಾಣಿ ಸಂಖ್ಯೆ : 0836-2222392 ಜಾಲತಾಣ : www.kslu.ac.in

ಫ್ಯಾಕ್ಸ್ : 0836-2223392 ಇ-ಮೇಲ್: kslu.registrar@gmail.com


ಸಂಖ್ಯೆ: ಕರಾಕಾವಿ//2019-20/ -1392 ದಿನಾಂಕ: 02-11-2019

## ಸುತ್ತೋಲೆ

**ವಿಷಯ:** ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (ಸ್ಟೇಟ್ ಇ-ಸ್ಕಾಲರ್‌ಶಿಪ್ ಪೋರ್ಟಲ್) ಜಾರಿಗೊಳಿಸುವ ಬಗ್ಗೆ.

ಕರ್ನಾಟಕ ರಾಜ್ಯ ಸರ್ಕಾರವು ಜಾರಿಗೊಳಿಸಿರುವಂತಹ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (ಸ್ಟೇಟ್ ಇ-ಸ್ಕಾಲರ್‌ಶಿಪ್ ಪೋರ್ಟಲ್) ಕುರಿತಂತೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಕಾನೂನು ಕಾಲೇಜುಗಳು ಈ ಕೆಳಕಂಡ ಕ್ರಮಗಳನ್ನು ತುರ್ತಾಗಿ ವಹಿಸುವಂತೆ ಸೂಚಿಸಲಾಗಿದೆ.

1. ಇ-ಆಡಳಿತ ಕೇಂದ್ರದಿಂದ ಒದಗಿಸಲಾಗುವ ಎಲ್ಲ ಆ ಪ್ರಚಾರ ಸಾಮಗ್ರಿ ಬಳಸಿಕೊಂಡು, ಕ್ಯಾಂಪಸ್‌ಗಳಲ್ಲಿ "ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (ಸ್ಟೇಟ್ ಇ-ಸ್ಕಾಲರ್‌ಶಿಪ್ ಪೋರ್ಟಲ್)" ಹಾಗೂ "ಇ-ದೃಢೀಕರಣ" (e-Attestation)ಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡಿ, ತಮ್ಮ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು.
2. ವಿಶ್ವವಿದ್ಯಾಲಯದಿಂದ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (ಸ್ಟೇಟ್ ಇ-ಸ್ಕಾಲರ್‌ಶಿಪ್ ಪೋರ್ಟಲ್) ಕೋರಿರುವಂತಹ ಮಾಹಿತಿಯನ್ನು ಸಮರ್ಪಕವಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾರಿಗಿರುವ ಬಗ್ಗೆ ದೃಢೀಕೃತ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. (ಗೂಗಲ್ ಲಿಂಗ್ ಮೂಲಕ ಒದಗಿಸಿರುವ ಮಾಹಿತಿಯನ್ನು ಪ್ರಾಂಶುಪಾಲರ ಮೇಲು ರುಜುವಿನೊಂದಿಗೆ ದೃಢೀಕರಿಸಿ ಇ-ಮೇಲ್ ಹಾಗೂ ಅಂಚೆ ಮೂಲಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.)
3. ತಮ್ಮ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಎರಡರಿಂದ-ಐದು ಇ-ದೃಢೀಕರಣ ಅಧಿಕಾರಿಗಳು ನೇಮಕ ಮಾಡುವುದು.
4. ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗೆ ಅರ್ಜಿಯನ್ನು ಸಲ್ಲಿಸಲು ಅಗತ್ಯವಾದ ಅಧ್ಯಯನ ದೃಡೀಕರಣಪತ್ರ ಹಾಗೂ ಹಾಸ್ಟೆಲ್ ದೃಢೀಕರಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಲು ಕ್ರಮವಹಿಸುವುದು.

5. ಇ–ಆಡಳಿತ ಕೇಂದ್ರ ನಡೆಸಲಾಗುವ ಎಲ್ಲ ಆಡಿಯೋ ಮತ್ತು ವಿಡಿಯೋ ತರಬೇತಿಗಳಲ್ಲಿ ಭಾಗವಹಿಸುವಂತೆ ಎಲ್ಲಾ ಇ–ದೃಢೀಕರಣ ಅಧಿಕಾರಿಗಳಿಗೆ ಸೂಚಿಸುವುದು.
6. ಬ್ಯಾಂಕ್ ಅಕೌಂಟ್‌ಗೆ ತಮ್ಮ ಆಧಾರ್ ಸಂಖ್ಯೆಯನ್ನು ಜೋಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು.
7. ವಿದ್ಯಾರ್ಥಿ ವೇತನ ಪಡೆಯಲು ವಿವಿಧ ಇಲಾಖೆಗಳ ಅರ್ಹತಾ ಮಾನದಂಡಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು.
8. ರಾಜ್ಯ ಸರ್ಕಾರದಿಂದ ಈ ಉದ್ದೇಶಕ್ಕಾಗಿ ಬೇರೆ ಯಾವುದೇ ಪೋರ್ಟಲ್ ಇರುವುದಿಲ್ಲ ಎಂಬ ಮಾಹಿತಿಯನ್ನು ತಿಳಿಸುವುದು.
9. ದಿವ್ಯಾಂಗ ಮಕ್ಕಳು ಭಾರತ ಸರ್ಕಾರ ನೀಡುವ "ವಿಶಿಷ್ಟ ಗುರುತಿನ ಚೀಟಿ" (Unique Identification Card) ಯನ್ನು ಹೊಂದಿರಬೇಕಾದುದು ಕಡ್ಡಾಯವಾಗಿರುವ ಕಾರಣ ಅವರ ಪೋಷಕರಿಗೆ ಸೂಕ್ತ ಜಾಗೃತಿ ನೀಡಲು ಸೂಚಿಸುವುದು.
10. ನಿಮ್ಮ ಅಧೀನದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿನ ಡಿಜಿಟಲ್ ಲೈಬ್ರರಿ, ಕಂಪ್ಯೂಟರ್ ಕೇಂದ್ರಗಳನ್ನು ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅನುವುಮಾಡಿಕೊಡುವುದು.
11. ಆಯಾ ದಿನದ ಪ್ರಮಾಣಪತ್ರ ದೃಢೀಕರಣಕ್ಕಾಗಿ ಬಂದ ಅರ್ಜಿಗಳನ್ನು ಅದೇ ದಿನವೇ ಇ–ದೃಢೀಕರಣ ತಂತ್ರಾಂಶದಲ್ಲಿ ವಿಲೇಗೊಳಿಸಲು ಎಲ್ಲಾ ಇ–ದೃಢೀಕರಣ ಅಧಿಕಾರಿಗಳಿಗೆ ಕಟ್ಟುನಿಟ್ಟಾದ ಆದೇಶ ಹೊರಡಿಸುವುದು.
12. ಯಾವುದೇ ಸಂದೇಹಗಳಿದ್ದಲ್ಲಿ ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಗನ್ನು ಸಂಪರ್ಕಿಲಸು ಸೂಚಿಸುವುದು.

ಈ ಮೇಲಿನ ಕ್ರಮಗಳನ್ನು ತುರ್ತಾಗಿ ಅನುಷ್ಠಾನಗೊಳಿಸಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (ಸ್ಟೇಟ್ ಇ–ಸ್ಕಾಲರ್‌ಶಿಪ್ ಪೋರ್ಟಲ್) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವ್ಯಾಪಿಯಲ್ಲಿ ಯಶಸ್ವಿಯಾಗಿ ಜಾರಿಯಾಗಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

04.11.19
ಕುಲಸಚಿವರು

ಗೆ,

ವಿಶ್ವವಿದ್ಯಾಲಯದ ಕಾನೂನು ಶಾಲೆಯ ನಿರ್ದೇಶಕರು/ಎಲ್ಲ ಸಂಯೋಜಿತ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಯನ್ನು,

1. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಕಾವಿ, ಹುಬ್ಬಳ್ಳಿ.